ಕಮ್ಮಿ ಇಲ್ಲ ಅನ್ನಂಗೆ ತಾನೂ ಪಾಸಾದ. ಎಂಟನೇ ಕ್ಲಾಸ್ ಓದಕೆ ನಮ್ಮೂರಿಗೆ ಕರ್ಕಂಡೋಗ್ತಿವಿ ಎಂದು ರಜುಕ್ಕೆ ಬಂದು ಕರ್ಕಂಡೋಗಿದ್ದ ದುರ್ಗಯ್ಯ ಮತ್ತೆ ಅಲ್ಯಾಕ ಸರಿಯಾಗಲ್ಲ ಅಂತ ತಂದು ಇಲ್ಲೆ ಬಿಟ್ಟ. ಇಷ್ಟೊರ್ಷ ಬೆಳ್ಸಿ ದೊಡ್ಡನ್ಮಾಡಿದ್ಮೇಲೆ ಈಗ ಬಿಟ್ಟೆರಕೆ ನಮ್ಗೂ ಆಗಲ್ಲ ಅಂತ ಅಜ್ಜಿ ತಾತ ಸಂತೋಷದಿಂದಲೆ ಕರ್ಕಂಡ್ರು. ಈಗ ಹೈಸ್ಕೂಲಿಗೆ ಹೋಗ್ಬೇಕು ಅಂದ್ರೆ ಮಾದಾಪುರದಿಂದ ಮುಂದುಕ್ಕೆ ಮೂರು ಕಿಲೋಮೀಟ್ರು ನಡ್ಕಂಡೋಗಿ ಬುದ್ದೆರಪಾಳ್ಯ ತಲುಪಬೇಕು. ಹೋಬಳಿ ಕೇಂದ್ರವಾಗಿದ್ದ ಅಲ್ಲಿ ಮಠದವದ್ದೊಂದು ಹೈಸ್ಕೂಲಿತ್ತು. ಸುತ್ತ ಮುತ್ತಲ ಹಳ್ಳಿ ಹುಡುಗ್ರೆಲ್ಲ ಅಲ್ಗೆ ಬರದು. ಯತಾ ಪ್ರಕಾರವಾಗಿ ಮಗುನ್ನ ಸ್ಕೂಲಿಗೆ ಸೇರ್ಸೋಗನ ಅಂತ ಅಪ್ಪ ದುರ್ಗಯ್ಯ ಬಂದಿದ್ದ. ಅಡ್ಮಿಷನ್ ಮಾಡುಸ್ಬೇಕಾದ್ರೆ ಮತ್ತೆ ಅದೆ ಗೊಂದಲ. ಅವರ ಗೊಂದಲ ಪರಿಹಾರಕ್ಕೆ ಇದ್ದುದು ಒಂದೆ ಮಾರ್ಗ ಮಿಡ್ಲಿಸ್ಕೂಲಿಂದ ಅದೆ ಹೆಸ್ರಾಗೆ ಟಿ.ಸಿ ಕೊಟ್ಟು ಕಳಿಸೆವ್ರೆ. ಆದ್ರಿಂದ ಏನೇ ಮಾತಾಡಿರು ಬರೆ ಮ್ಯಾಗ್ರವಾಕ್ತವೆ ಎಂದು ಅಡ್ಮಿಷನ್ ಮಾಡ್ಕೆಂಡ್ರು.

ಈ ಎಲ್ಲಾ ಚರ್ಚೆಗಳನ್ನ ದೂರದಿಂದಲೇ ಗಮನಿಸುತ್ತಿದ್ದ ಕೆಂಪು ನಾಮದ ಕನ್ನಡ ಮೇಷ್ಟ್ರು, ದುರ್ಗಯ್ಯ ಮಗುನ್ನ ಬಿಟ್ಟು ಹೋಗುತ್ತಿರುವಾಗ ಹಿಂದಿಂದೆ ಬಂದು 'ನಿಲ್ಲಯ್ಯ ಇಲ್ಲಿ' ಎಂದ. 'ಯಾಕ್ ಬುದ್ದಿ' ಎಂದು ಹಿಂದಿರುಗಿ ನೋಡಿದಾಗ 'ಯಾವ್ ಬೇಕುಫ್‌ನಯ್ಯ ನಿನ್ ಮಗುಂಗೆ ಆ ಹೆಸರಿಟ್ಟಿತ್ತು. ಅವ್ನೆಂತ ಕ್ರೂರಿ ಗೊತ್ತೇನಯ್ಯ, ಹಿಂದುಗಳ್ನೆಲ್ಲ ಮಾರಣ ಹೋಮ ಮಾಡ್ದವ್ನು ಕಣಯ್ಯ ಅವ್ನು. ನೀನು ಒಬ್ಬ ಹಿಂದು ಆಗಿ ಅಂಥ ಹೆಸರಿಕ್ಕಕೆ ನಾಚ್ಕೆ ಆಗಲ್ವ' ಎಂದು ಪಾಠ ಮಾಡುತ್ತಲೇ ಓದ. ದುರ್ಗಯ್ಯಂಗೆ ಮೊದಲ ಬಾರಿ ಈ ವಿಷಯ ಕೇಳಿ ಮೈ ಬೆವ್ತಂಗಾತು. 'ಅಲ್ಲ ಸ್ವಾಮಿ ಲಾವ್ಣೆರು ಹೇಳಿದ್ದು, ಬ್ರಿಟಿಷರ್ನ ಕೊಂದದ್ದು, ಇದೆಲ್ಲ ಸುಳ್ಳ.' 'ಯೋ, ಲಾವ್ಣೆರ್ಗೆ ಏನ್ ಗೊತ್ತಯ್ಯ, ಅವ್ರೇನ್ ಓದೆವ್ರ ಬರ್ದವ್ರ? ಓದಿರನು ನಾನ್ ಹೇಳ್ತಿದಿನಿ ಕೇಳು, ಮೊದಲು ಈ ಹೆಸ್ರುನ್ನ ಬದಲಾಯ್ಸು, ಇಲ್ದೆ ಓದ್ರೆ ನೀನ್ ಅನುಭವಿಸ್ಬೇಕಾಗುತ್ತೆ ಹೋಗು' ಎಂದ. ಅಪ್ಪ ಕಾಂಪೌಂಡ್ ಬಿಟ್ಟು ಹೋಗ್ಬೇಕಾದ್ರೆ ಕಿಟಕಿ ಪಕ್ದಲ್ಲಿ ಕೂತಿದ್ದ ಮಗನನ್ನೊಮ್ಮೆ ನೋಡಿದ. ಟಿಪ್ಪು ಅಪ್ಪನನ್ನೇ ನೋಡುತ್ತ ಕೈ ಬೀಸಿ ಟಾಟಾ ಮಾಡುತ್ತಿದ್ದ.

ಎಂದೂ ಕೇಳಿರದ ಇಂಥದೊಂದು ಸುದ್ದಿ ತಲಿಗಿಕ್ಯಂಡು ಕೊನೆ ಹಳ್ಳಿಗೆ ಬಂದ ದುರ್ಗಯ್ಯ ಹೆಂಡ್ತಿ ಗಂಗಮ್ಮುನ್ನ ಬಳಿ ಮೇಷ್ಟ್ರು ಹೇಳಿದ್ನೆಲ್ಲ ಬಿಡಿಸಿದ. ಅದುಕ್ಕೆ ಗಂಗಮ್ಮ ಹೇಳಿದ್ದು ಒಂದೇ ಮಾತು. 'ನಾನು ಮೊದ್ಲೆ ಹೇಳ್ದೆ ಆ ಇಸ್ಕೂಲು ಸರಿ ಇಲ್ಲ, ನಾವು ಓದ್ಬೇಕಾದ್ರು ಅಲ್ಲೆ ಬುದ್ದೆರ ಬಗ್ಗೆ ಜನ ಏನೇನೊ ಮಾತಾಡರು, ಓದಿರೋದ್ಲಿ ಬಿಟ್ರೆ ಬಿಡ್ಲಿ, ಕಟ್ಟಿರ ಹೆಸ್ರ ಈಗ ಅಳ್ಸಕಾಗುತ್ತ. ಹೋಗಿ ಕರ್ಕಂಡು ಬಾ ಹೋಗು.'

ಇತ್ತೀಚೆಗೆ ಟಿಪ್ಪು ನೆಡ್ಕಂಡು ಬರೊ ದಾರಿಲೊಂದು ಹೊಸದಾಗಿ ಬುಕ್ ಸ್ಟಾಲ್ ಓಪನ್ ಆಗಿತ್ತು. 'ಕಾರ್ಗಿಲ್ ಬುಕ್ ಸ್ಟಾಲ್' ಎಂದಿದ್ದ ಅದರಲ್ಲಿ ಪೆನ್ನು, ನೋಟ್ ಬುಕ್ಸ್ ಜೊತೆಗೆ ದೇಶ ಭಕ್ತರೆನ್ನಿಸಿಕೊಂಡವರ ಚಾರ್ಟ್‌ಗಳು, ಪುಸ್ತಕಗಳು ದಾರಿಹೋಕರಿಗೂ ಕಾಣುವಂತೆ ಜೋಡಿಸಿದ್ದರು. ಸೀಜನ್‌ವಾರು ರಾಕಿ, ಕೇಸರಿ ಬಾವುಟಗಳು, ಗ್ರೀಟಿಂಗ್‌ಗಳೂ ಸಿಗುತ್ತಿದ್ದವು. ಸಂಜೆ ಅಲ್ಲಿ ನಾಮಧಾರಿ ಕೆಲ ಯುವಕರು ಗುಂಪುಗೂಡಿ ದೇಶದ ಬಗೆಗಿನ ವೀರಾವೇಶದ ಮಾತುಗಳನ್ನ ಕೇಳಿಸಿಕೊಳ್ಳುತ್ತಿದ್ದರು. ಅಲ್ಲಿನ ಸ್ಥಳಿಯರ ಮಾಹಿತಿ ಪ್ರಕಾರ ಇನ್ನು ಯುವಕನಾಗಿದ್ದ ಆ ಅಂಗಡಿ ಓನರ್ ಸ್ವತಃ ಈ ಊರಿನವನಲ್ಲವೆಂದೂ, ಕರಾವಳಿ ಜಿಲ್ಲೆಯವನಾದ ಆತ ಯುವಕರಲ್ಲಿ ರಾಷ್ಟ್ರಪ್ರೇಮವನ್ನ ಬಿತ್ತಲು ಬಂದಿದ್ದಾನೆಂದು ಆತನೊಂದಿಗೆ ಗೌರವದಿಂದ ನಡೆದುಕೊಳ್ಳುತ್ತಿದ್ದರು.

ಟಿಪ್ಪು ಓದುತ್ತಿದ್ದ ಬುದ್ದೇರ ಹೈಸ್ಕೂಲಿನ ಹಲವು ಶಿಕ್ಷಕರು ತಮ್ಮ ಬಿಡುವಿನ ವೇಳೆಯನ್ನು 'ಕಾರ್ಗಿಲ್ ಬುಕ್ ಸ್ಟಾಲ್'ನಲ್ಲಿ ಕಳೆಯಲು ಇತ್ತೀಚೆಗೆ ರೂಢಿಸಿಕೊಂಡಿದ್ದರು. ಆ